KAUK610014002024

# ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊನ್ನಾವರ

**ಉಪಸ್ಥಿತರುಃ ಶ್ರೀ ಬಿ. ಸಿ. ಚಂದ್ರಶೇಖರ,** ಬಿ.ಎ. ಎಲ್.ಎಲ್.ಬಿ.,
**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ. ದ. ನ್ಯಾ. ದಂಡಾಧಿಕಾರಿಗಳು, ಹೊನ್ನಾವರ.**

**ಸಿ.ಸಿ. ನಂ.569/2024**

**ದಿನಾಂಕ 10ನೇ ಏಪ್ರಿಲ್, 2026**

**ಪಿರ್ಯಾದಿದಾರರುಃ** ಕರ್ನಾಟಕ ಸರ್ಕಾರ,
ಪ್ರತಿನಿಧಿಸುವವರು,
ಪೊಲೀಸ್ ಉಪ-ನಿರೀಕ್ಷಕರು,
ಹೊನ್ನಾವರ ಪೊಲೀಸ್ ಠಾಣೆ.

(ಪ್ರತಿನಿಧಿಸುವವರು ಸಹಾಯಕ ಸರ್ಕಾರಿ ಅಭಿಯೋಜಕರು)

**// ವಿರುದ್ಧ //**

**ಆರೋಪಿಃ** ಅರುಣ ತಂದೆ ಕೇಶವ ನಾಯ್ಕ,
ವಯಸ್ಸು 52 ವರ್ಷಗಳು,
ಉದ್ಯೋಗಃ ಕೂಲಿ ಕೆಲಸ,
ವಾಸಃ ಚಂದಾವರ ನಾಕಾ, ಚಂದಾವರ,
ಹೊನ್ನಾವರ ತಾಲೂಕು.

(ಪ್ರತಿನಿಧಿಸುವವರು ಶ್ರೀ ಎಸ್.ಜಿ.ಸಿ., ವಕೀಲರು)

| | | |
|---|---|---|
| 01. ಘಟನೆ ನಡೆದ ದಿನಾಂಕ | : | 12-08-2024 |
| 02. ವರದಿ ಮಾಡಿದ ದಿನಾಂಕ | : | 12-08-2024 |
| 03. ಆರೋಪಿಯನ್ನು ಬಂಧಿಸಿದ ದಿನಾಂಕ | : | 12-08-2024 |
| 04. ಪಿರ್ಯಾದುದಾರರ ಹೆಸರು | : | ಶ್ರೀ ಮಹಾಂತೇಶ ಉದಯ ನಾಯಕ |
| 05. ಸಾಕ್ಷಿ ವಿಚಾರಣೆ ಪ್ರಾರಂಭಿಸಿದ ದಿನಾಂಕ | : | 24-04-2025 |
| 06. ಸಾಕ್ಷಿ ವಿಚಾರಣೆ ಮುಕ್ತಾಯಗೊಳಿಸಿದ ದಿನಾಂಕ | : | 09-01-2026 |
| 07. ಆರೋಪಿಯ ಮೇಲೆ ಇರುವ ಆಪಾದನೆಗಳು | : | ಕರ್ನಾಟಕ ಅಬಕಾರಿ ಕಾಯ್ದೆ ಕಲಂ 32, 34 |
| 08. ತೀರ್ಪು | : | ಆರೋಪಿಯನ್ನು ಬಿಡುಗಡೆಗೊಳಿಸಲಾಗಿದೆ |

Digitally signed by B. C. Chandrashekar (Senior Civil Judge and JMFC Honnavar)

## **ತೀರ್ಪು**

ಹೊನ್ನಾವರ ಪೊಲೀಸ್ ಠಾಣೆಯ ಪೊಲೀಸ್ ಉಪ-ನಿರೀಕ್ಷಕರವರು ಆರೋಪಿಯ ವಿರುದ್ಧ ಕರ್ನಾಟಕ ಅಬಕಾರಿ ಕಾಯ್ದೆ ಕಲಂ 32 ಮತ್ತು 34ರ ಅಡಿಯಲ್ಲಿನ ಶಿಕ್ಷಾರ್ಹ ಅಪರಾಧಕ್ಕಾಗಿ ಈ ದೋಷಾರೋಪಣಾ ಪತ್ರವನ್ನು ಸಲ್ಲಿಸಿರುತ್ತಾರೆ.

02. ಈ ದೋಷಾರೋಪಣಾ ಪತ್ರದ ರೀತ್ಯಾ ಅಭಿಯೋಜನೆಯ ಸಂಕ್ಷಿಪ್ತ ಸಾರಾಂಶವೇನೆಂದರೆ, ದಿನಾಂಕ 12-08-2024ರಂದು ಮಧ್ಯಾಹ್ನ 01-20ರ ಸಮಯಕ್ಕೆ ಆರೋಪಿಯು ಹೊನ್ನಾವರ ತಾಲೂಕಿನ ಚಂದಾವರ ನಾಕಾದಿಂದ ಮಾರುತಿ ದೇವಸ್ಥಾನ ಕಡೆಗೆ ಹೋಗುವ ರಸ್ತೆಯಲ್ಲಿ ಇರುವ ಆತನ ಸಹೋದರನಾದ ಚಾಸಾ-9 ಗಣಪತಿ ಕೇಶವ ನಾಯ್ಕುರವರ ಹೆಸರಿನಲ್ಲಿರುವ ಮನೆ ನಂ.371ರ ಅಡುಗೆ ಮನೆಯಲ್ಲಿ ಸರ್ಕಾರದಿಂದ ಯಾವುದೇ ಅನುಮತಿ ಅಥವಾ ಪರವಾನಿಗೆಯನ್ನ ಪಡೆಯದೇ ಅನಧಿಕೃತವಾಗಿ ಕೆಂಪು ಬಣ್ಣದ 02 ಪ್ಲಾಸ್ಟಿಕ್ ಚೀಲದಲ್ಲಿ ಹೈವರ್ಡ್ಸ್ ಚಿಯರ್ಸ್ ವಿಸ್ಕಿ ಎಂದು ಬರೆದ ಖಾಕಿ ಬಣ್ಣದ ಒಂದು ರಟ್ಟಿನ ಬಾಕ್ಸ, ಓರಿಜಿನಲ್ ಚಾಯ್ಸು ಎಂದು ಬರೆದ ಖಾಕಿ ಬಣ್ಣದ ಒಂದು ರಟ್ಟಿನ ಬಾಕ್ಸಗಳಲ್ಲಿ ತಲಾ 500 ಮಿ.ಲೀ ಅಳತೆಯ ಯು.ಬಿ. ಎಕ್ಸಪೋರ್ಟ್ ಬಿಯರ್ ಹೆಸರಿನ 17 ಟಿನ್‌ಗಳು,

ತಲಾ 180 ಮಿ.ಲೀ ಅಳತೆಯ ಬೆಂಗಳೂರು ವಿಸ್ಕಿ ಹೆಸರಿನ ಒಟ್ಟು 9 ಪೌಚ್‌ಗಳು, ತಲಾ 90 ಮಿ.ಲೀ ಅಳತೆಯ ಒರಿಜಿನಲ್ ಚಾಯ್ಸ್ ಡಿಲಕ್ಸ್ ವಿಸ್ಕಿ ಹೆಸರಿನ 138 ಪೌಚ್‌ಗಳು, ತಲಾ 90ಮಿ.ಲೀ ಅಳತೆಯ ಹೈವರ್ಡ್ಸ್ ಚಿಯರ್ಸ ವಿಸ್ಕಿ ಹೆಸರಿನ ಒಟ್ಟೂ 84 ಪೌಚ್‌ಗಳು, ತಲಾ 180 ಮಿ.ಲೀ ಅಳತೆಯ ಓಲ್ಡ್ ಟಾವರಿನ ವಿಸ್ಕಿ ಹೆಸರಿನ ಒಟ್ಟೂ 20 ಪೌಚ್‌ಗಳು ಇದ್ದು, ಒಟ್ಟೂ 33.700 ಲೀಟರ್ ಪ್ರಮಾಣದ ಸಾರಾಯಿಯನ್ನು ಅಕ್ರಮವಾಗಿ ಮಾರಾಟ ಮಾಡಿ ಲಾಭಗಳಿಸುವ ಉದ್ದೇಶದಿಂದ ತನ್ನ ವಾಸದ ಮನೆಯ ಅಡುಗೆ ಕೋಣೆಯಲ್ಲಿ ಇಟ್ಟುಕೊಂಡಿದ್ದು, ದಾಳಿಯ ಕಾಲಕ್ಕೆ ಸಿಕ್ಕಿಬಿದ್ದಿದ್ದು, ಈ ಮೂಲಕ ಆರೋಪಿಯು ಕರ್ನಾಟಕ ಅಬಕಾರಿ ಕಾಯ್ದೆ ಕಲಂ 32 ಮತ್ತು 34ರ ಅಡಿಯಲ್ಲಿನ ಶಿಕ್ಷಾರ್ಹ ಅಪರಾಧವೆಸಗಿರುತ್ತಾರೆ ಎಂಬುದಾಗಿ ಈ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಲಾಗಿರುತ್ತದೆ.

03. ಚಾಸಾ–1ರವರು ತಮಗೆ ಬಂದ ಮಾಹಿತಿಯಂತೆ ಆರೋಪಿಯ ಮೇಲೆ ದಾಳಿ ಮಾಡಿ ಅಕ್ರಮ ಮದ್ಯವನ್ನು ಜಪ್ತು ಪಡಿಸಿಕೊಂಡು, ಕಚೇರಿಗೆ ಹಾಜರಾಗಿ ಸರ್ಕಾರದ ಪರವಾಗಿ ಪಿರ್ಯಾದು ತಯಾರಿಸಿ ಅದರಂತೆ ಆರೋಪಿಯ ವಿರುದ್ಧ ಪ್ರಕರಣ ದಾಖಲಾಗಿರುತ್ತದೆ. ದಾಳಿಯ ನಂತರ ಬಂಧಿಸಿದ ಆರೋಪಿಯನ್ನು ರಿಮಾಂಡ್ ಅರ್ಜಿಯೊಂದಿಗೆ ಮಾನ್ಯ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು, ಆರೋಪಿಯು ವಕೀಲರ ಮೂಲಕ ಜಾಮೀನು ಅರ್ಜಿ ಸಲ್ಲಿಸಿದ್ದು ಆತನನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿರುತ್ತದೆ.

04. ತನಿಖಾಧಿಕಾರಿಗಳು ತಮ್ಮ ತನಿಖೆಯ ನಂತರ ಆರೋಪಿಯ ವಿರುದ್ಧ ಕರ್ನಾಟಕ ಅಬಕಾರಿ ಕಾಯ್ದೆ ಕಲಂ 32 ಮತ್ತು 34 ರಡಿಯಲ್ಲಿನ ಶಿಕ್ಷಾರ್ಹ ಅಪರಾಧಕ್ಕಾಗಿ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ. ಸದರಿ ಆರೋಪಿಯ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ಪರಿಶೀಲಿಸಿ ಈ ನ್ಯಾಯಾಲಯವು ಕರ್ನಾಟಕ ಅಬಕಾರಿ ಕಾಯ್ದೆ ಕಲಂ 32 ಮತ್ತು 34 ರಡಿಯಲ್ಲಿನ ಅಪರಾಧಕ್ಕಾಗಿ ಸಂಜ್ಞೆಯನ್ನು ತೆಗೆದುಕೊಳ್ಳಲಾಗಿರುತ್ತದೆ.

05. ದಂಡ ಪ್ರಕ್ರಿಯಾ ಸಂಹಿತೆ ಕಲಂ 207ರ ಅಡಿಯಲ್ಲಿ ಆರೋಪಿಗೆ ದೋಷಾರೋಪಣೆ ಪಟ್ಟಿಯ ಪ್ರತಿಯನ್ನು ಪೂರೈಸಲಾಗಿರುತ್ತದೆ. ದೋಷಾರೋಪಣೆ ಪೂರ್ವ ವಾದ ಆಲಿಸಲಾಗಿ ಆರೋಪಿಯನ್ನು ಬಿಡುಗಡೆಗೊಳಿಸುವ ಯಾವ ಅಂಶಗಳು ಕಂಡುಬರದೇ ಇದ್ದುದ್ದರಿಂದ ಕರ್ನಾಟಕ ಅಬಕಾರಿ ಕಾಯ್ದೆ ಕಲಂ 32 ಮತ್ತು 34ರ ಅಡಿಯಲ್ಲಿನ ಶಿಕ್ಷಾರ್ಹ ಅಪರಾಧಕ್ಕಾಗಿ ದೋಷಾರೋಪಣೆ ರಚಿಸಿ ಆರೋಪಿಗೆ ಅರ್ಥವಾಗುವ ಭಾಷೆಯಲ್ಲಿ ಓದಿ ಹೇಳಲಾಗಿ ಆರೋಪಿಯು ಆಪಾದನೆಯನ್ನು

ನಿರಾಕರಿಸಿ ವಿಚಾರಣೆಯಾಗಬೇಕೆಂದು ಕೇಳಿಕೊಂಡಿರುತ್ತಾರೆ. ಆದ್ದರಿಂದ ಈ ಪ್ರಕರಣವನ್ನು ವಿಚಾರಣೆಗೆ ತೆಗೆದುಕೊಳ್ಳಲಾಯಿತು.

06. ಅಭಿಯೋಜನೆಯು ಆರೋಪಿಯ ಆಪಾದನೆಯನ್ನು ರುಜುವಾತುಪಡಿಸಲು ದೋಷಾರೋಪಣಾ ಪಟ್ಟಿಯಲ್ಲಿ ನಮೂದಿಸಿರುವ 14 ಸಾಕ್ಷಿದಾರರ ಪೈಕಿ 05 ಸಾಕ್ಷಿದಾರರನ್ನು ಪ್ರಾಸಾ-1 ರಿಂದ 5 ರಂತೆ ವಿಚಾರಣೆಗೊಳಪಡಿಸಿ 11 ದಾಖಲೆಗಳನ್ನು ನಿಪಿ-1 ರಿಂದ 11 ರಂತೆ ಮತ್ತು ಮುದ್ದೆ ಮಾಲುಗಳನ್ನು ಮುದ್ದೆ ಮಾಲು-1 ರಿಂದ 7 ಎಂದು ಗುರುತಿಸಿಕೊಂಡಿರುತ್ತಾರೆ. ಅಭಿಯೋಜನೆಯ ಪರ ಸಾಕ್ಷಿ ವಿಚಾರಣೆ ಮುಕ್ತಾಯವಾದ ನಂತರ ದಂಡ ಪ್ರಕ್ರಿಯಾ ಸಂಹಿತೆಯ ಕಲಂ 313 ರಡಿಯಲ್ಲಿ ಆರೋಪಿಯನ್ನು ವಿಚಾರಣೆಗೊಳಪಡಿಸಿದ್ದು ಆರೋಪಿಯು ತನ್ನ ವಿರುದ್ಧದ ಸಾಕ್ಷ್ಯವನ್ನು ನಿರಾಕರಿಸಿದ್ದು ತನ್ನ ಪರವಾಗಿ ಯಾವುದೇ ಪ್ರತಿರಕ್ಷಾ ಸಾಕ್ಷ್ಯ ಇಲ್ಲವೆಂದು ಹೇಳಿರುತ್ತಾರೆ.

07. ಅಭಿಯೋಜನೆಯ ಪರ ಸಹಾಯಕ ಸರ್ಕಾರಿ ಅಭಿಯೋಜಕರು ಹಾಗೂ ಆರೋಪಿಯ ಪರ ವಕೀಲರ ವಾದವನ್ನು ಆಲಿಸಲಾಗಿದೆ.

08. ಈ ಮೇಲ್ಕಾಣಿಸಿದ ಅಂಶಗಳಿಂದ ನನ್ನ ಪರಿಗಣನೆಗೆ ಉದ್ಭವಿಸುವ ಅಂಶಗಳೇನೆಂದರೇಃ-

**01. ಅಂಶ ಸಂಖ್ಯೆ-1**: ದಿನಾಂಕ 12-08-2024ರಂದು ಮಧ್ಯಾಹ್ನ 01-20ರ ಸಮಯಕ್ಕೆ ಆರೋಪಿಯು ಹೊನ್ನಾವರ ಪೋಲೀಸ್ ಠಾಣಾ ವ್ಯಾಪ್ತಿಯ ಹೊನ್ನಾವರ ತಾಲೂಕಿನ ಚಂದಾವರ ನಾಕಾದಿಂದ ಮಾರುತಿ ದೇವಸ್ಥಾನ ಕಡೆಗೆ ಹೋಗುವ ರಸ್ತೆಯಲ್ಲಿ ಇರುವ ಆತನ ಸಹೋದರನಾದ ಚಾಸಾ-9ರವರ ಹೆಸರಿನಲ್ಲಿರುವ ಮನೆ ನಂ.371ರ ಅಡುಗೆ ಮನೆಯಲ್ಲಿ ಸರ್ಕಾರದಿಂದ ಯಾವುದೇ ಅನುಮತಿ ಅಥವಾ ಪರವಾನಿಗೆಯನ್ನ ಪಡೆಯದೇ ಅನಧಿಕೃತವಾಗಿ ಕೆಂಪು ಬಣ್ಣದ 02 ಪ್ಲಾಸ್ಟಿಕ್ ಚೀಲದಲ್ಲಿ ಹೈವರ್ಡ್ಸ್ ಚಿಯರ್ಸ್ ವಿಸ್ಕಿ ಅಂತಾ ಬರೆದ ಖಾಕಿ ಬಣ್ಣದ ಒಂದು ರಟ್ಟಿನ ಬಾಕ್ಸ, ಓರಿಜಿನಲ್ ಚಾಯ್ಸ ಅಂತಾ ಬರೆದ ಖಾಕಿ ಬಣ್ಣದ ಒಂದು ರಟ್ಟಿನ ಬಾಕ್ಸಗಳಲ್ಲಿ ತಲಾ 500 ಮಿ.ಲೀ ಅಳತೆಯ ಯು.ಬಿ. ಎಕ್ಸಪೋರ್ಟ್ ಬಿಯರ್ 17 ಟಿನ್‌ಗಳು, ತಲಾ 180 ಮಿ.ಲೀ ಅಳತೆಯ ಬೆಂಗಳೂರು ವಿಸ್ಕಿಯ 9 ಪೌಚ್‌ಗಳು, ತಲಾ 90 ಮಿ.ಲೀ ಅಳತೆಯ ಓರಿಜಿನಲ್ ಚಾಯ್ಸು ಡಿಲಕ್ಸ ವಿಸ್ಕಿಯ 138 ಪೌಚ್‌ಗಳು, ತಲಾ 90ಮಿ.ಲೀ ಅಳತೆಯ ಹೈವರ್ಡ್ಸ್ ಚಿಯರ್ಸ ವಿಸ್ಕಿಯ 84 ಪೌಚ್‌ಗಳು, ತಲಾ 180 ಮಿ.ಲೀ

ಅಳತೆಯ ಓಲ್ಡ್ ಟಾವರಿನ ವಿಸ್ಕಿಯ 20 ಪೌಚ್‌ಗಳು ಇದ್ದು, ಒಟ್ಟೂ 33.700 ಲೀಟರ್ ಪ್ರಮಾಣದ ಸಾರಾಯಿಯನ್ನು ಅಕ್ರಮವಾಗಿ ಮಾರಾಟ ಮಾಡಿ ಲಾಭಗಳಿಸುವ ಉದ್ದೇಶದಿಂದ ತನ್ನ ವಾಸದ ಮನೆಯ ಅಡುಗೆ ಕೋಣೆಯಲ್ಲಿ ದಾಸ್ತಾನು ಇಟ್ಟುಕೊಂಡಿದ್ದು ದಾಳಿಯ ಕಾಲಕ್ಕೆ ಸಿಕ್ಕಿಬಿದ್ದಿದ್ದು, ಈ ಮೂಲಕ ಆರೋಪಿಯು ಕರ್ನಾಟಕ ಅಬಕಾರಿ ಕಾಯ್ದೆ 1965ರ ಕಲಂ 32 ಮತ್ತು 34ರನ್ವಯ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದಾರೆ ಎಂಬುದನ್ನು ಸಂಶಯಾತೀತವಾಗಿ ರುಜುವಾತುಪಡಿಸುತ್ತಾರೆಯೆ?

02. **ಅಂಶ ಸಂಖ್ಯೆ-2:** ಯಾವ ಆದೇಶ?

09. ಈ ಮೇಲಿನ ಅಂಶಗಳಿಗೆ ನನ್ನ ಉತ್ತರಗಳು ಈ ಕೆಳಗಿನಂತಿದೆ.

| | | |
|---|---|---|
| ಅಂಶ ಸಂಖ್ಯೆ-1 | : | ನಕಾರಾತ್ಮಕವಾಗಿ, |
| ಅಂಶ ಸಂಖ್ಯೆ-2 | : | ಅಂತಿಮ ಆದೇಶದಂತೆ |

## ಕಾರಣಗಳು

10. **ಅಂಶ ಸಂಖ್ಯೆ-1**: ಅಭಿಯೋಜನೆಯ ರೀತ್ಯಾ ಆರೋಪಿಯು ಕರ್ನಾಟಕ ಅಬಕಾರಿ ಕಾಯ್ದೆ ಕಲಂ 32 ಮತ್ತು 34ರಡಿ ಅಪರಾಧವೆಸಗಿರುತ್ತಾರೆಂದು ಆಪಾದಿಸಿದ್ದು ಸದರಿ ಆಪಾದನೆಯನ್ನು ರುಜುವಾತುಪಡಿಸಲು ಅಭಿಯೋಜನೆಯು ದಾಳಿಯ ಕಾಲಕ್ಕೆ ಹಾಜರಿದ್ದ ಪಂಚ ಸಾಕ್ಷಿದಾರರಾದ ಚಾಸಾ-2ರವರನ್ನು ಪ್ರಾಸಾ-1ರಂತೆ ವಿಚಾರಣೆಗೆ ಒಳಪಡಿಸಿಕೊಂಡಿದ್ದು, ಪ್ರಾಸಾ-1ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಈಗ್ಗೆ 02 ವರ್ಷಗಳ ಹಿಂದೆ ಚಂದಾವರ ಬ್ರಿಡ್ಜ್ ಹತ್ತಿರ ತಾನು ಲಾರಿಯಲ್ಲಿ ಕಲ್ಲು ತುಂಬಿಕೊಂಡು ಹೋಗುತ್ತಿದ್ದಾಗ ಪೊಲೀಸರು ತನ್ನನ್ನು ತಡೆದು ನಿಲ್ಲಿಸಿ ಸ್ಥಳ ಪಂಚನಾಮೆ ಮತ್ತು ಹ್ಯಾಶಿಂಗ್ ವರದಿಗೆ ಸಹಿಯನ್ನು ತೆಗೆದುಕೊಂಡಿದ್ದು, ನಿಪಿ-1ಮತ್ತು 2ರಲ್ಲಿ ಬರೆದಿರುವ ವಿಚಾರ ತನಗೆ ಗೊತ್ತಿಲ್ಲ, ತನ್ನ ಸಮಕ್ಷಮ ಪೊಲೀಸರು ಯಾವುದೇ ಮದ್ಯವನ್ನು ಅಮಾನತ್ತು ಪಡಿಸಿಕೊಂಡಿಲ್ಲ ಎನ್ನುವುದಾಗಿ ಸಾಕ್ಷ್ಯ ನುಡಿಯುವ ಮೂಲಕ ಪ್ರತಿಕೂಲ ಸಾಕ್ಷಿಯಾಗಿರುತ್ತಾರೆ.

11. ಅಭಿಯೋಜನೆಯು ಮುಂದುವರಿದು ದಾಳಿಯ ಕಾಲಕ್ಕೆ ಹಾಜರಿದ್ದ ಮತ್ತೋರ್ವ ಪಂಚರಾದ ಚಾಸಾ-3ರವರನ್ನು ಪ್ರಾಸಾ-2ರಂತೆ ವಿಚಾರಣೆಗೆ ಒಳಪಡಿಸಿಕೊಂಡಿದ್ದು, ಪ್ರಾಸಾ-2 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಈಗ್ಗೆ 02 ವರ್ಷಗಳ ಹಿಂದೆ ಚಂದಾವರ ಬ್ರಿಡ್ಜ್ ಹತ್ತಿರ ತಾನು ಲಾರಿಯಲ್ಲಿ ಕಲ್ಲು ತುಂಬಿಕೊಂಡು ಹೋಗುತ್ತಿದ್ದಾಗ ಪೊಲೀಸರು ತನ್ನನ್ನು ತಡೆದು ನಿಲ್ಲಿಸಿ ಸ್ಥಳ ಪಂಚನಾಮೆ ಮತ್ತು

ಹ್ಯಾಶಿಂಗ್ ವರದಿಗೆ ಸಹಿಯನ್ನು ತೆಗೆದುಕೊಂಡಿದ್ದು, ನಿಪಿ-1ಮತ್ತು 2ರಲ್ಲಿ ಬರೆದಿರುವ ವಿಚಾರ ತನಗೆ ಗೊತ್ತಿಲ್ಲ, ತನ್ನ ಸಮಕ್ಷಮ ಪೊಲೀಸರು ಯಾವುದೇ ಮದ್ಯವನ್ನು ಅಮಾನತ್ತು ಪಡಿಸಿಕೊಂಡಿಲ್ಲ ಎನ್ನುವುದಾಗಿ ಸಾಕ್ಷ್ಯ ನುಡಿಯುವ ಮೂಲಕ ಪ್ರತಿಕೂಲ ಸಾಕ್ಷಿಯಾಗಿರುತ್ತಾರೆ. ಸಹಾಯಕ ಸರ್ಕಾರಿ ಅಭಿಯೋಜಕರು ಫ್ರಾಸಾ-1 ಮತ್ತು 2 ರವರನ್ನು ಪ್ರತಿಕೂಲ ಸಾಕ್ಷಿದಾರರು ಎಂದು ಪರಿಗಣಿಸಿ ಪಾಟೀ ಸವಾಲಿಗೆ ಒಳಪಡಿಸಿರುತ್ತಾರೆ. ಆದರೆ ಅಭಿಯೋಜನೆಗೆ ಪೂರಕವಾಗುವಂತಹ ಯಾವುದೇ ಸಾಕ್ಷ್ಯವನ್ನು ಫ್ರಾಸಾ-1 ಮತ್ತು 2ರವರಿಂದ ಹೇಳಿಸುವಲ್ಲಿ ವಿಫಲರಾಗಿರುತ್ತಾರೆ. ಆದ್ದರಿಂದ ಫ್ರಾಸಾ-1 ಮತ್ತು 2ರವರು ತನಿಖಾಧಿಕಾರಿಗಳ ದಾಳಿಯ ಕಾಲಕ್ಕೆ ಮತ್ತು ಆರೋಪಿಯ ಸ್ವಾಧೀನದಿಂದ ಅಕ್ರಮ ಮದ್ಯವನ್ನು ಅಮಾನತ್ತು ಪಡಿಸಿಕೊಳ್ಳುವ ಕಾಲಕ್ಕೆ ಹಾಜರಿದ್ದ ಮಹತ್ವದ ಪಂಚರಾಗಿದ್ದು ಇವರು ಅಭಿಯೋಜನೆಯ ಪ್ರಕರಣಕ್ಕೆ ವಿರುದ್ಧವಾಗಿ ಪ್ರತಿಕೂಲ ಸಾಕ್ಷ್ಯ ನುಡಿದಿರುವುದರಿಂದ ಅಭಿಯೋಜನೆಯ ಪ್ರಕರಣದ ಮೇಲೆ ಬಲವಾದ ಅನುಮಾನ ಉದ್ಭವಿಸುತ್ತದೆ.

12. ಅಭಿಯೋಜನೆಯು ಪ್ರಕರಣದಲ್ಲಿ ದಾಳಿ ಮಾಡಿದ ಅಧಿಕಾರಿಯಾದ ಚಾಸಾ-1ರವರನ್ನು ಫ್ರಾಸಾ-3ರಂತೆ ವಿಚಾರಣೆಗೊಳಪಡಿಸಿದ್ದು, ಫ್ರಾಸಾ-3ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕ 12-08-2024 ರಂದು ಬೆಳಿಗ್ಗೆ 11-00ರ ಸಮಯದಲ್ಲಿ ತಾನು ಠಾಣೆಯಲ್ಲಿದ್ದಾಗ ಚಾಸಾ-4ರವರು ಕರೆ ಮಾಡಿ ಚಂದಾವರ ನಾಕಾದಿಂದ ಮಾರುತಿ ದೇವಸ್ಥಾನದ ಕಡೆಗೆ ಹೋಗುವ ರಸ್ತೆಯಲ್ಲಿ ಒಬ್ಬ ವ್ಯಕ್ತಿ ತನ್ನ ವಾಸದ ಮನೆಯಲ್ಲಿ ಅಕ್ರಮ ಮದ್ಯವನ್ನು ಮಾರಾಟ ಮಾಡಲು ಅಕ್ರಮವಾಗಿ ತನ್ನ ಮನೆಯಲ್ಲಿ ಇಟ್ಟುಕೊಂಡಿರುವುದಾಗಿ ಮಾಹಿತಿ ನೀಡಿದ್ದರಿಂದ ತಾನು ಈ ವಿಚಾರವನ್ನು ಮೇಲಾಧಿಕಾರಿಗಳಿಗೆ ತಿಳಿಸಿ, ಘಟನಾ ಸ್ಥಳವು ವಾಸದ ಮನೆಯಾಗಿದ್ದರಿಂದ ಚಾಸಾ-10ರವರ ಮೂಲಕ ಭಟ್ಕಳ ಉಪ-ವಿಭಾಗದ ಡಿ.ವೈ.ಎಸ್.ಪಿ ರವರಿಗೆ ಸರ್ಚ್ ವಾರಂಟ್‌ಗಾಗಿ ಮನವಿ ಸಲ್ಲಿಸಿ ಸರ್ಚ್ ವಾರಂಟ್ ಪಡೆದುಕೊಂಡು ಮಧ್ಯಾಹ್ನ 12-35ರ ಸಮಯಕ್ಕೆ ತಾನು ಮತ್ತು ಚಾಸಾ-5 ರಿಂದ 8ರವರು ಇಲಾಖಾ ವಾಹನದಲ್ಲಿ ಹೊರಟು ಚಂದಾವರ ಸೇತುವೆಯ ಹತ್ತಿರ ಹೋಗಿ ಚಾಸಾ-4ರವರ ಮೂಲಕ ಚಾಸಾ-2 ಮತ್ತು 3ರವರನ್ನು ಪಂಚರನ್ನಾಗಿ ಬರಮಾಡಿಕೊಂಡು ಅವರಿಗೆ ಮಾಹಿತಿ ತಿಳಿಸಿ, ಮಧ್ಯಾಹ್ನ 01-20ರ ಸಮಯಕ್ಕೆ ಆರೋಪಿ ಮನೆ ಹತ್ತಿರ ಹೋಗಲಾಗಿ ಚಾಸಾ-4ರವರು ಸುಮಾರು 50ಅಡಿ ದೂರದಿಂದ ಆರೋಪಿ ಮನೆಯನ್ನು ತೋರಿಸಿದ್ದು ನಂತರ ಆರೋಪಿಯ ಮನೆಯ ಮೇಲೆ ಪಂಚರ ಸಮಕ್ಷಮ ದಾಳಿ ಮಾಡಿದ್ದು ಆರೋಪಿಯು ತನ್ನ ಹೆಸರು ಮತ್ತು ವಿಳಾಸ ತಿಳಿಸಿದ್ದು ಆತನ ಮನೆಯನ್ನು ಪರಿಶೀಲಿಸಿದಾಗ ಅಡುಗೆ ಮನೆಯ ದಕ್ಷಿಣ ಭಾಗದಲ್ಲಿ ಎರಡು ಕೆಂಪು ಬಣ್ಣದ ಪ್ಲಾಸ್ಟಿಕ್ ಚೀಲದಲ್ಲಿ ಮತ್ತು ಒಂದು ರಟ್ಟಿನ ಬಾಕ್ಸನಲ್ಲಿ ಮದ್ಯ ಇರುವುದು ಕಂಡು ಬಂದಿದ್ದು, ಆರೋಪಿಯ ಬಳಿ ಲೈಸನ್ಸ ಕೇಳಿದಾಗ ಇಲ್ಲವೆಂದು ಹೇಳಿದ್ದರಿಂದ ಪಂಚರ ಸಮಕ್ಷಮ

ಅವುಗಳನ್ನು ತೆರೆದು ನೋಡಿದಾಗ ಕೆಂಪು ಬಣ್ಣದ ಪ್ಲಾಸ್ಟಿಕ್ ಚೀಲದಲ್ಲಿ 500 ಮಿ.ಲೀ.ಯ 17 ಯುಬಿ ಎಕ್ಸಪೋರ್ಟ ಬಿಯರ್ ಟಿನ್‌ಗಳು, 180 ಎಮ್.ಎಲ್ ನ 9 ಬೆಂಗಳೂರು ವಿಸ್ಕಿ ಪೌಚ್‌ಗಳು, 90 ಎಮ್.ಎಲ್ ನ 138 ಓಸಿ ಡಿಲಕ್ಸ ವಿಸ್ಕಿ ಪೌಚ್‌ಗಳು, 90 ಎಮ್.ಎಲ್ ನ 84 ಹೈವರ್ಡ್ಸ ಚಿಯರ್ಸ ವಿಸ್ಕಿ ಪೌಚ್‌ಗಳು, 180 ಎಮ್.ಎಲ್ ನ 20 ಓಟಿ ವಿಸ್ಕಿ ಪೌಚ್‌ಗಳು ಇದ್ದು, ಸದರಿ ಮದ್ಯಗಳನ್ನು ಪ್ಲಾಸ್ಟಿಕ್ ಚೀಲಗಳನ್ನು ಮತ್ತು ರಟ್ಟಿನ ಬಾಕ್ಸಗಳನ್ನು ಅಮಾನತ್ತು ಪಡಿಸಿಕೊಂಡು ಎಲ್ಲಾ ಮದ್ಯವನ್ನು ರಾಸಾಯನಿಕ ಪರೀಕ್ಷೆಗಾಗಿ ಮಾದರಿ ತೆಗೆದು ವಿವರವಾದ ಪಂಚನಾಮೆಯನ್ನು ತಯಾರಿಸಿ ಫೋಟೋ ತೆಗೆದು ಸಂಪೂರ್ಣ ದಾಳಿಯ ವಿವರವನ್ನು ಸೊನಿ ಹ್ಯಾಂಡಿ ಕ್ಯಾಮೆರಾದಲ್ಲಿ ಚಿತ್ರೀಕರಣ ಮಾಡಿಕೊಂಡಿದ್ದು, ಸದರಿ ಚಿತ್ರಿಕರಣವನ್ನು ಲ್ಯಾಪ್‌ಟಾಪ್‌ಗೆ ಹಾಕಿ ಡಿ.ವಿ.ಡಿಗೆ ಡೌನ್‌ಲೋಡ್ ಮಾಡಿ ಪಂಚರ ಸಮಕ್ಷಮ ಹ್ಯಾಶಿಂಗ್ ವರದಿಯನ್ನು ತಯಾರಿಸಿದ್ದು, ನಂತರ ಆರೋಪಿಯನ್ನು ವಶಕ್ಕೆ ಪಡೆದು ಠಾಣೆಗೆ ಬಂದು ದೂರನ್ನು ತಯಾರಿಸಿ ಠಾಣಾಧಿಕಾರಿಯವರ ಮುಂದೆ ದೂರು, ಆರೋಪಿ, ಪಂಚನಾಮೆ ಮತ್ತು ಅಮಾನತ್ತುಪಡಿಸಿಕೊಂಡ ಮದ್ಯವನ್ನು ಹಾಜರು ಪಡಿಸಿದ್ದಾಗಿ ಸಾಕ್ಷ್ಯವನ್ನು ನುಡಿದಿರುತ್ತಾರೆ.

13. ಅಭಿಯೋಜನೆಯು ಮುಂದುವರಿದು ದಾಳಿಯ ಕಾಲಕ್ಕೆ ಭಾಗವಹಿಸಿದ್ದ ಮಹಿಳಾ ಪೇದೆಯಾದ ಚಾಸಾ-5ರವರನ್ನು ಫ್ರಾಸಾ-4ರಂತೆ ವಿಚಾರಣೆಗೆ ಒಳಪಡಿಸಿಕೊಂಡಿದ್ದು, ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕ 12-08-2024ರಂದು ಮಧ್ಯಾಹ್ನ 12-30ರ ಸಮಯದಲ್ಲಿ ತಾನು ಠಾಣೆಯಲ್ಲಿದ್ದಾಗ ಚಾಸಾ-1ರವರು ತನ್ನನ್ನು ಮತ್ತು ಚಾಸಾ-2 ರಿಂದ 4, 6 ಮತ್ತು 7 ರವರನ್ನು ಕರೆದು ಚಂದಾವರ ನಾಕಾದಿಂದ ಮಾರುತಿ ದೇವಸ್ಥಾನದ ಕಡೆಗೆ ಹೋಗುವ ರಸ್ತೆಯಲ್ಲಿ ಒಬ್ಬ ವ್ಯಕ್ತಿ ತನ್ನ ವಾಸದ ಮನೆಯಲ್ಲಿ ಅಕ್ರಮ ಮದ್ಯವನ್ನು ಮಾರಾಟ ಮಾಡಲು ಮದ್ಯವನ್ನು ದಾಸ್ತಾನು ಇಟ್ಟುಕೊಂಡಿರುವುದಾಗಿ ಮಾಹಿತಿ ಬಂದಿದ್ದು, ಚಾಸಾ-1ರವರು ತಮ್ಮನ್ನು ಇಲಾಖಾ ವಾಹನದಲ್ಲಿ ಮಾಹಿತಿ ಬಂದ ಸ್ಥಳಕ್ಕೆ ಕರೆದುಕೊಂಡು ಹೋಗಿದ್ದು, ಚಂದಾವರ ಸೇತುವೆಯ ಹತ್ತಿರ ಹೋಗಿ ಚಾಸಾ-4ರವರ ಮೂಲಕ ಚಾಸಾ-2 ಮತ್ತು 3ರವರನ್ನು ಪಂಚರನ್ನಾಗಿ ಬರಮಾಡಿಕೊಂಡು ಆರೋಪಿ ಮನೆ ಹತ್ತಿರ ಹೋಗಲಾಗಿ ಚಾಸಾ-4ರವರು ಆರೋಪಿ ಮನೆಯನ್ನು ತೋರಿಸಿದ್ದು ಮಧ್ಯಾಹ್ನ 01-30ರ ಸಮಯದಲ್ಲಿ ಆರೋಪಿಯ ಮನೆಯ ಮೇಲೆ ಪಂಚರ ಸಮಕ್ಷಮ ದಾಳಿ ಮಾಡಿ ಆರೋಪಿಯನ್ನು ವಿಚಾರಿಸಲಾಗಿ ಆತ ತನ್ನ ಹೆಸರು ಮತ್ತು ವಿಳಾಸ ತಿಳಿಸಿದ್ದು, ಆತನ ಮನೆಯನ್ನು ಪರಿಶೀಲಿಸಿದಾಗ ಅಡುಗೆ ಮನೆಯ ದಕ್ಷಿಣದಲ್ಲಿ ಎರಡು ಕೆಂಪು ಬಣ್ಣದ ಪ್ಲಾಸ್ಟಿಕ್ ಚೀಲದಲ್ಲಿ ಮತ್ತು ಒಂದು ರಟ್ಟಿನ ಬಾಕ್ಸನಲ್ಲಿ ಮದ್ಯ ಇರುವುದು ಕಂಡು ಬಂದಿದ್ದು ಆರೋಪಿಯ ಬಳಿ ಚಾಸಾ-1ರವರು ಅವುಗಳ ಬಗ್ಗೆ ಲೈಸನ್ಸ ಕೇಳಿದಾಗ ಇಲ್ಲವೆಂದು ಹೇಳಿದ್ದು ಪಂಚರ ಸಮಕ್ಷಮ ಅವುಗಳನ್ನು ತೆರೆದು ನೋಡಿದಾಗ ಕೆಂಪು ಬಣ್ಣದ ಪ್ಲಾಸ್ಟಿಕ್ ಚೀಲದಲ್ಲಿ 500 ಎಮ್.ಎಲ್ ನ 17

ಯುಬಿ ಎಕ್ಸಪೋರ್ಟ ಬಿಯರ್ ಟಿನ್‌ಗಳು, 180 ಎಮ್.ಎಲ್ ನ 9 ಬೆಂಗಳೂರು ವಿಸ್ಕಿ ಪೌಚ್‌ಗಳು, 90 ಎಮ್.ಎಲ್ ನ 138 ಓಸಿ ಡಿಲಕ್ಸ ವಿಸ್ಕಿ ಪೌಚ್‌ಗಳು, 90 ಎಮ್.ಎಲ್ ನ 84 ಹೈವರ್ಡ್ಸ ಚಿಯರ್ಸ ವಿಸ್ಕಿ ಪೌಚ್‌ಗಳು, 180 ಎಮ್.ಎಲ್ ನ 20 ಓಟಿ ವಿಸ್ಕಿ ಪೌಚ್‌ಗಳು ಇದ್ದು ಸದರಿ ಮದ್ಯಗಳನ್ನು, ಪ್ಲಾಸ್ಟಿಕ್ ಚೀಲಗಳನ್ನು ಮತ್ತು ರಟ್ಟಿನ ಬಾಕ್ಸಗಳನ್ನು ಅಮಾನತ್ತುಪಡಿಸಿಕೊಂಡು ಎಲ್ಲಾ ಮದ್ಯವನ್ನು ರಾಸಾಯನಿಕ ಪರೀಕ್ಷೆಗಾಗಿ ಮಾದರಿ ತೆಗೆದು ಪಂಚನಾಮೆಯನ್ನು ತಯಾರಿಸಿ ಪೋಟೋ ತೆಗೆದು ಸಂಪೂರ್ಣ ದಾಳಿಯ ವಿವರವನ್ನು ಸೊನಿ ಹ್ಯಾಂಡಿ ಕ್ಯಾಮೆರಾದಲ್ಲಿ ಚಿತ್ರೀಕರಣ ಮಾಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ.

14. ಫ್ರಾಸಾ-3 ದಾಳಿ ಮಾಡಿರುವ ಪೊಲೀಸ್ ಉಪ-ನಿರೀಕ್ಷಕರಾಗಿದ್ದು, ತಮಗೆ ಬಂದ ಮಾಹಿತಿಯಂತೆ ಮಾಹಿತಿ ಸ್ಥಳಕ್ಕೆ ಭೇಟಿ ನೀಡಿ ಆರೋಪಿಯನ್ನು ಹಿಡಿದು, ಆತನ ಸ್ವಾಧೀನದಿಂದ ಮದ್ಯವನ್ನು ಪಂಚರ ಸಮಕ್ಷಮ ಅಮಾನತ್ತುಪಡಿಸಿಕೊಂಡಿರುವ ಬಗ್ಗೆ ಸಾಕ್ಷ್ಯ ನುಡಿದಿರುತ್ತಾರೆ. ಅದೇ ರೀತಿ ಫ್ರಾಸಾ-4 ಫ್ರಾಸಾ-3ರವರ ದಾಳಿಯಲ್ಲಿ ಭಾಗಿಯಾಗಿ ಫ್ರಾಸಾ-4ರವರು ದಾಳಿಯ ಬಗ್ಗೆ ವಿವರವಾಗಿ ಸಾಕ್ಷ್ಯ ನುಡಿದಿರುತ್ತಾರೆ. ಫ್ರಾಸಾ-3 ಮತ್ತು 4ರ ಸಾಕ್ಷ್ಯದ ರೀತ್ಯಾ ಆರೋಪಿಯನ್ನು ಹಿಡಿದು ಆತನ ಸ್ವಾಧೀನದಿಂದ ಅಕ್ರಮ ಮದ್ಯವನ್ನು ಪಂಚರ ಸಮಕ್ಷಮ ಅಮಾನತ್ತುಪಡಿಸಿಕೊಂಡಿದ್ದು, ಪಂಚರ ಸಾಕ್ಷ್ಯವು ಪ್ರಕರಣದ ರುಜುವಾತಿಗೆ ಬಹುಮುಖ್ಯ ಪಾತ್ರವನ್ನು ವಹಿಸುತ್ತಿದ್ದು, ಈಗಾಗಲೇ ಚರ್ಚಿಸಿದಂತೆ ಫ್ರಾಸಾ-1 ಮತ್ತು 2 ಪಂಚರಾಗಿದ್ದು, ತಮ್ಮ ಸಾಕ್ಷ್ಯದಲ್ಲಿ ಪೊಲೀಸರು ಯಾವುದೇ ವಸ್ತುಗಳನ್ನು ತಮ್ಮ ಸಮಕ್ಷಮ ಅಮಾನತ್ತುಪಡಿಸಿಕೊಂಡಿಲ್ಲ ಎಂಬುದಾಗಿ ಸಾಕ್ಷ್ಯ ನುಡಿಯುವ ಮೂಲಕ ಪ್ರತಿಕೂಲ ಸಾಕ್ಷಿಯಾಗಿರುವುದರಿಂದ ಅಭಿಯೋಜನೆಯ ಪ್ರಕರಣದ ಮೇಲೆ ಈಗಾಗಲೇ ಬಲವಾದ ಸಂಶಯ ಉದ್ಭವಿಸಿರುತ್ತದೆ. ಆದ್ದರಿಂದ ದಾಳಿ ಮಾಡಿದ ಫ್ರಾಸಾ-3ರವರ ಸಾಕ್ಷ್ಯವು ಮತ್ತು ಅವರ ಜೊತೆಯಲ್ಲಿ ಭಾಗಿಯಾಗಿದ್ದ ಫ್ರಾಸಾ-4ರವರ ಸಾಕ್ಷ್ಯವು ಈಗಾಗಲೇ ಉದ್ಭವಿಸಿರುವ ಸಂಶಯವನ್ನು ತೆಗೆದು ಹಾಕುವಂತಹ ಸಾಕ್ಷ್ಯವಾಗಿ ಕಂಡುಬರುತ್ತಿಲ್ಲ. ಆದ್ದರಿಂದ ಫ್ರಾಸಾ-3 ಮತ್ತು 4ರವರ ಸಾಕ್ಷ್ಯಕ್ಕೆ ಹೆಚ್ಚಿನ ಒತ್ತು ಕೊಡುವ ಅವಶ್ಯಕತೆ ಕಂಡುಬರುತ್ತಿಲ್ಲ.

15. ಅಭಿಯೋಜನೆಯು ಮುಂದುವರಿದು ಪ್ರಕರಣವನ್ನು ದಾಖಲಿಸಿದ ಫ್ರಾಸಾ-5ರವರನ್ನು ವಿಚಾರಣೆಗೊಳಪಡಿಸಿದ್ದು, ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕ 12-08-2024ರಂದು ಮಧ್ಯಾಹ್ನ 03-00ರ ಸಮಯಕ್ಕೆ ಚಾಸಾ-1ರವರು ಅಬಕಾರಿ ದಾಳಿಯ ನಂತರ ಠಾಣೆಗೆ ಹಾಜರಾಗಿ ಒಂದು ದೂರು, ಪಂಚನಾಮೆ, ಮುದ್ದೆಮಾಲುಗಳು ಮತ್ತು ಆರೋಪಿಯನ್ನು ಹಾಜರುಪಡಿಸಿದ್ದು ಸದರಿ ದೂರಿನ ಆಧಾರದಲ್ಲಿ ಠಾಣಾ ಮೊಕದ್ದಮೆ ಸಂಖ್ಯೆ181/2024ರಂತೆ ಪ್ರಕರಣ ದಾಖಲಿಸಿ ಪ್ರಥಮ

ವರ್ತಮಾನ ವರದಿಯನ್ನು ತಯಾರಿಸಿದ್ದಾಗಿ, ಅದೇ ದಿನ ಕಲಂ 63(4)ರ ಪ್ರಮಾಣ ಪತ್ರವನ್ನು ಪಡೆದುಕೊಂಡು, ಮುದ್ದೆಮಾಲುಗಳನ್ನು ಠಾಣಾ ಪಿ.ಎಫ್.ನಲ್ಲಿ ನಮೂದಿಸಿ, ಅಕ್ರಮ ಮದ್ಯ ಅಮಾನತ್ತುಪಡಿಸಿಕೊಂಡ ಬಗ್ಗೆ ಅಬಕಾರಿ ಉಪ-ಆಯುಕ್ತರಿಗೆ ಮಾಹಿತಿ ನೀಡಿ, ಹಾಜರುಪಡಿಸಿದ ಆರೋಪಿಯನ್ನು ಬಂಧಿಸಿ ದಸ್ತಗಿರಿ ಕ್ರಮ ಅನುಸರಿಸಿ ಮಾನ್ಯ ನ್ಯಾಯಾಲಯದ ಮುಂದೆ ಹಾಜರುಪಡಿಸಿದ್ದು, ದಾಳಿಯ ಕಾಲಕ್ಕೆ ಸಹಕರಿಸಿದ ಚಾಸಾ-4 ರಿಂದ 10ರವರ ಹೇಳಿಕೆ ಪಡೆದಿದ್ದು, ದಿನಾಂಕ 20-08-2024 ರಂದು ಅಮಾನತ್ತುಪಡಿಸಿಕೊಂಡಿದ್ದ ಮದ್ಯವನ್ನು ಚಾಸಾ-11ರವರ ಮೂಲಕ ರಾಸಾಯನಿಕ ಪರೀಕ್ಷೆಗೆ ಕಳುಹಿಸಿ, ದಿನಾಂಕ 22-08-2024ರಂದು ಎಫ್.ಎಸ್.ಎಲ್. ವರದಿಯನ್ನು ಸ್ವೀಕರಿಸಿದ್ದು, ದಿನಾಂಕ 26-08-2024ರಂದು ಘಟನಾ ಸ್ಥಳದ ಮಾಲೀಕತ್ವಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ಪೂರೈಸುವಂತೆ ಚಂದಾವರ ಗ್ರಾಮಪಂಚಾಯತಿ ಪಿ.ಡಿ.ಒ.ರವರಿಗೆ ಪತ್ರ ಬರೆದಿದ್ದು ದಿನಾಂಕ 28-08-2024ರಂದು ಪಿ.ಡಿ.ಒ.ರವರಿಂದ ಪ್ರಕರಣಕ್ಕೆ ಸಂಬಂಧಪಟ್ಟ ಮಾಹಿತಿಯನ್ನು ಪಡೆದುಕೊಂಡು, ತನಿಖೆ ಪೂರೈಸಿ ಆರೋಪಿ ವಿರುದ್ಧ ದೋಷಾರೋಪಣ ಪಟ್ಟಿ ಸಲ್ಲಿಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಆದರೆ ಈಗಾಗಲೇ ಚರ್ಚಿಸಿರುವಂತೆ ಪ್ರಕರಣದ ಬಹುಮುಖ್ಯ ಸಾಕ್ಷಿದಾರರಾದ ಫ್ರಾಸಾ-1 ಮತ್ತು 2ರವರು ಆರೋಪಿಯು ಮಾರಾಟಕ್ಕೆಂದು ಇಟ್ಟುಕೊಂಡಿದ್ದ ಅಕ್ರಮ ಮದ್ಯವನ್ನು ಜಪ್ತುಪಡಿಸಿಕೊಂಡ ಕಾಲಕ್ಕೆ ಹಾಜರಿದ್ದ ಪಂಚನಾಮೆಯ ಸಾಕ್ಷಿದಾರರು ಈಗಾಗಲೇ ಪ್ರತಿಕೂಲ ಸಾಕ್ಷಿದಾರರಾಗಿದ್ದು ಮತ್ತು ಆರೋಪಿಯು ತನ್ನ ವಾಸದ ಮನೆಯಲ್ಲಿ ಅಕ್ರಮ ಮದ್ಯವನ್ನು ದಾಸ್ತಾನು ಇಟ್ಟುಕೊಂಡಿರುವ ಬಗ್ಗೆ ಇವರ ವಿಚಾರಣೆಯಲ್ಲಿ ಯಾವುದೇ ಸಾಕ್ಷ್ಯವು ಕಂಡುಬರದೇ ಇರುವುದರಿಂದ ಅಭಿಯೋಜನೆಯು ಅಕ್ರಮ ಮದ್ಯವನ್ನು ಆರೋಪಿಯಿಂದ ವಶಪಡಿಸಿಕೊಳ್ಳಲಾಗಿದೆ ಎಂದು ರುಜುವಾತುಪಡಿಸಲು ವಿಫಲವಾಗಿದ್ದರಿಂದ ಕೇವಲ ತನಿಖಾಧಿಕಾರಿಗಳ ಸಾಕ್ಷ್ಯವೇ ಮಹತ್ವದ ಸಾಕ್ಷ್ಯವಾಗಿರುವುದಿಲ್ಲ. ಆದ್ದರಿಂದ ತನಿಖಾಧಿಕಾರಿಯವರ ಸಾಕ್ಷ್ಯದ ಮೇಲೆ ಹೆಚ್ಚಿನ ಮಹತ್ವ ನೀಡುವ ಅವಶ್ಯಕತೆ ಕಂಡು ಬರುತ್ತಿಲ್ಲ.

16. ಪ್ರಸ್ತುತ ಪ್ರಕರಣದಲ್ಲಿ ಒದಗಿಸಲಾದ ಮೌಖಿಕ ಹಾಗೂ ದಾಖಲಾತಿಗಳ ಸಾಕ್ಷ್ಯವನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ ಕಂಡುಬಂದ ಅಂಶವೇನೆಂದರೆ ಫ್ರಾಸಾ-1 ಮತ್ತು 2ರವರು ಪಂಚನಾಮೆಯ ಸಾಕ್ಷಿದಾರರಾಗಿದ್ದು ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಪೊಲೀಸರು ತಮ್ಮ ಸಮಕ್ಷಮ ಆರೋಪಿಯಿಂದ ಯಾವುದೇ ಮದ್ಯವನ್ನು ಅಮಾನತ್ತುಪಡಿಸಿಕೊಂಡಿಲ್ಲ ಎಂದು ಸಾಕ್ಷ್ಯ ನುಡಿದು ಅಭಿಯೋಜನೆಯ ಪ್ರಕರಣಕ್ಕೆ ಪ್ರತಿಕೂಲ ಸಾಕ್ಷಿಗಳಾಗಿರುವುದರಿಂದ ಇವರನ್ನು ಸಹಾಯಕ ಸರಕಾರಿ ಅಭಿಯೋಜಕರು ಪಾಟೀ ಸವಾಲಿಗೆ ಒಳಪಡಿಸಿದ್ದರೂ ಸಹ ಅಭಿಯೋಜನೆಗೆ ಪೂರಕವಾಗುವಂತಹ ಯಾವುದೇ ಸಾಕ್ಷ್ಯವನ್ನು ಹೇಳಿಸುವಲ್ಲಿ ವಿಫಲರಾಗಿರುತ್ತಾರೆ. ಆದ್ದರಿಂದ ಅಭಿಯೋಜನೆಯ ಪ್ರಕರಣದ

ಮೇಲೆ ಬಹಳಷ್ಟು ಅನುಮಾನಕ್ಕೆ ಕಾರಣವಾಗಿರುತ್ತದೆ. ಫ್ರಾಸಾ–3 ರಿಂದ 5ರವರು ಪೊಲೀಸ್ ಅಧಿಕಾರಿಗಳಾಗಿದ್ದು ಇವರು ತಮ್ಮ ತನಿಖೆಯ ಬಗ್ಗೆ ಸಾಕ್ಷ್ಯವನ್ನು ನುಡಿದಿದ್ದರೂ ಸಹ ಪಂಚನಾಮೆಯ ಸಾಕ್ಷ್ಯವು ತನಿಖಾಧಿಕಾರಿಯವರ ಸಾಕ್ಷ್ಯಕ್ಕೆ ಪೂರಕವಾಗಿರುವುದಿಲ್ಲ. ಸದರಿ ದಿನ ಆರೋಪಿಯು ಯಾವುದೇ ಪರವಾನಗಿ ಇಲ್ಲದೇ ಅಕ್ರಮವಾಗಿ ಮದ್ಯ ಮಾರಾಟ ಮಾಡುವ ಉದ್ದೇಶದಿಂದ ತನ್ನ ಸ್ವಾಧೀನದಲ್ಲಿ ದಾಸ್ತಾನು ಇಟ್ಟುಕೊಂಡಿದ್ದ ಎಂಬುದಕ್ಕೆ ಪೂರಕವಾಗಿ ಅಭಿಯೋಜನೆಯು ಯಾವುದೇ ಪೂರಕ ಸಾಕ್ಷಿಯನ್ನು ಒದಗಿಸಿರುವುದಿಲ್ಲ. ಆದ್ದರಿಂದ ಅಭಿಯೋಜನೆಯು ಆಪಾದಿಸಲಾದಂತೆ ಆರೋಪಿಯು ಅಪರಾಧವೆಸಗಿರುತ್ತಾನೆ ಎಂಬುದು ಸಾಕ್ಷಿಗಳ ವಿಚಾರಣೆಯಿಂದ ಕಂಡುಬಂದಿರುವುದಿಲ್ಲ. ಮುದ್ದೆ ಮಾಲು ವಸ್ತುಗಳ ಅಮಾನತ್ತು ಮತ್ತು ಸ್ಥಳ ಪಂಚನಾಮೆಗಳು ಕೂಡ ಸಂಶಯದಲ್ಲಿ ಸಿಲುಕಿರುತ್ತದೆ. ಈ ನಿಟ್ಟಿನಲ್ಲಿ ಫ್ರಾಸಾ–1 ರಿಂದ 5 ರವರೆಗಿನ ವಿಚಾರಣೆಯು ಅಭಿಯೋಜನೆಯ ಆಪಾದನೆಗಳನ್ನು ಪುಷ್ಠೀಕರಿಸುವಲ್ಲಿ ವಿಫಲವಾಗಿರುತ್ತವೆ. ಅಭಿಯೋಜನೆಯು ಪ್ರಕರಣವನ್ನು ಸಾಬೀತುಗೊಳಿಸಲು ಸ್ವತಂತ್ರ ಹಾಗೂ ಆಸಕ್ತಿ ರಹಿತ ಸಾಕ್ಷಿಗಳನ್ನು ಒದಗಿಸಿರುವುದಿಲ್ಲ. ಆರೋಪಿಯು ಅಭಿಯೋಜನೆ ಆಪಾದಿಸಿದಂತೆ ಕೃತ್ಯವನ್ನು ಎಸಗಿದ್ದಾನೆ ಎಂಬುದನ್ನು ಸಾಬೀತುಪಡಿಸುವಲ್ಲಿ ವಿಫಲವಾಗಿರುತ್ತದೆ. ತನಿಖಾಧಿಕಾರಿಗಳ ಸಾಕ್ಷ್ಯವನ್ನು ನಂಬಲು ಪೂರಕ ಸ್ವತಂತ್ರ ಸಾಕ್ಷಿಗಳ ಅವಶ್ಯಕತೆ ಇರುತ್ತದೆ. ಆದರೆ ಅಭಿಯೋಜನೆಯು ಅಂತಹ ಯಾವುದೇ ಸಾಕ್ಷ್ಯವನ್ನು ಒದಗಿಸಿರುವುದಿಲ್ಲ. ಅಭಿಯೋಜನೆಯು ಆರೋಪಿಯ ವಿರುದ್ಧ ಅಪರಾಧಗಳನ್ನು ಸಾಬೀತುಪಡಿಸುವಲ್ಲಿ ವಿಫಲವಾಗಿರುತ್ತದೆ. ಈ ಕಾರಣದಿಂದಾಗಿ ಆರೋಪಿಯು ಸಂಶಯದ ಲಾಭದಡಿಯಲ್ಲಿ ಬಿಡುಗಡೆ ಹೊಂದಲು ಅರ್ಹರಾಗಿರುತ್ತಾರೆ. ಆದ್ದರಿಂದ **ಅಂಶ ಸಂಖ್ಯೆ–1ನ್ನು ನಕಾರಾತ್ಮಕವಾಗಿ** ಉತ್ತರಿಸಲಾಗಿದೆ.

17. **ಅಂಶ ಸಂಖ್ಯೆ–2:** ಮೇಲೆ ಹೇಳಿದ ಈ ಎಲ್ಲಾ ಕಾರಣಗಳಿಂದಾಗಿ ಈ ಕೆಳಕಂಡಂತೆ ಆದೇಶ ಜಾರಿಗೊಳಿಸಲಾಗಿದೆ.

## ಆದೇಶ

ದಂಡ ಪ್ರಕ್ರಿಯಾ ಸಂಹಿತೆಯ ಕಲಂ 248(1)ರ ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಆರೋಪಿಯನ್ನು ಕರ್ನಾಟಕ ಅಬಕಾರಿ ಕಾಯ್ದೆ ಕಲಂ 32 ಮತ್ತು 34 ರಡಿಯಲ್ಲಿನ ಶಿಕ್ಷಾರ್ಹ ಅಪರಾಧದ ಆಪಾದನೆಯಿಂದ ದೋಷಮುಕ್ತಗೊಳಿಸಿ ಬಿಡುಗಡೆಗೊಳಿಸಲಾಗಿದೆ.

ಆರೋಪಿ ಮತ್ತು ಜಾಮೀನುದಾರರು ಬರೆದುಕೊಟ್ಟ ಜಾಮೀನು ಮುಚ್ಚಳಿಕೆ ಪತ್ರಗಳನ್ನು ರದ್ದುಗೊಳಿಸಲಾಗಿದೆ.

ಆರೋಪಿ ಮತ್ತು ಜಾಮೀನುದಾರರು ದಂಡ ಪ್ರಕ್ರಿಯಾ ಸಂಹಿತೆಯ ಕಲಂ 437(ಎ)ರಡಿಯಲ್ಲಿ ಬರೆದುಕೊಟ್ಟಿರುವ ಜಾಮೀನು ಬಂಧ ಪತ್ರಗಳು 06 ತಿಂಗಳ ಅವಧಿಯವರೆಗೆ ಚಾಲ್ತಿಯಲ್ಲಿರುತ್ತವೆ.

ಮು.ಮಾ.1 ರಿಂದ 7 ನಿರುಪಯುಕ್ತ ವಸ್ತುಗಳಾಗಿರುವುದರಿಂದ ಅವುಗಳನ್ನು ಮೇಲ್ಮನವಿ ಕಾಲಾವಧಿ ಮುಗಿದ ನಿಯಮಾನುಸಾರ ವಿಲೇ ಮಾಡಲು ಅಬಕಾರಿ ಇಲಾಖೆಗೆ ಹಸ್ತಾಂತರಿಸಲು ಆದೇಶಿಸಲಾಗಿದೆ.

ಪ್ರಕರಣದ ವಸ್ತು ಸ್ಥಿತಿ ಮತ್ತು ಸಂದರ್ಭಾನುಸಾರ ದಂಡ ಪ್ರಕ್ರಿಯಾ ಸಂಹಿತೆಯ ಕಲಂ 357(1) ರಡಿಯಲ್ಲಿ ನೊಂದ ವ್ಯಕ್ತಿಯ ಪರಿಹಾರದ ಮೇಲೆ ಯಾವುದೇ ಆದೇಶ ಇರುವುದಿಲ್ಲ.

(ಈ ತೀರ್ಪನ್ನು ಶೀಘ್ರಲಿಪಿಗಾರರಿಗೆ ನೇರವಾಗಿ ಗಣಕ ಯಂತ್ರದಲ್ಲಿ ಉಕ್ತಲೇಖನ ಕೊಟ್ಟು, ಅವರು ಬೆರಳಚ್ಚು ಮಾಡಿದ್ದನ್ನು, ಓದಿ, ತಿದ್ದುಪಡಿ ಮಾಡಿ, ಈ ದಿನ ಅಂದರೆ ದಿನಾಂಕ 10ನೇ ಏಪ್ರಿಲ್, 2026ರಂದು ಬಹಿರಂಗ ನ್ಯಾಯಾಲಯದಲ್ಲಿ ಘೋಷಿಸಿರುತ್ತೇನೆ)

Digitally signed by
B. C. Chandrashekar
(Senior Civil Judge
and JMFC
Honnavar)

## ಅನುಬಂಧ

**ಅಭಿಯೋಜನೆಯ ಪರವಾಗಿ ಸಾಕ್ಷಿದಾರರ ಪಟ್ಟಿ:**

| | | |
|---|---|---|
| ಫ್ರಾಸಾ–1 | : | ಶ್ರೀ ಗಜಾನನ ದೇವಿದಾಸ ನಾಯ್ಕ |
| ಫ್ರಾಸಾ–2 | : | ಶ್ರೀ ನವೀನ ದತ್ತಾತ್ರಯ ನಾಯ್ಕ |
| ಫ್ರಾಸಾ–3 | : | ಶ್ರೀ ಮಹಾಂತೇಶ ಉದಯ ನಾಯಕ |
| ಫ್ರಾಸಾ–4 | : | ಶ್ರೀಮತಿ ಪದ್ಮಾವತಿ ನಾರಾಯಣ ಗೌಡ |
| ಫ್ರಾಸಾ–5 | : | ಶ್ರೀಮತಿ ಸಂಗೀತಾ ಕಾರ್ತಿಕ್ ಕಂಬಳಿ |

**ಆರೋಪಿಯ ಪರವಾಗಿ ಸಾಕ್ಷಿದಾರರ ಪಟ್ಟಿ:**

–ಇಲ್ಲ–

**ಅಭಿಯೋಜನೆಯ ಪರವಾಗಿ ನಿಶಾನೆ ದಾಖಲೆಗಳ ಪಟ್ಟಿ:**

| | | |
|---|---|---|
| ನಿಪಿ–1 | : | ಪಂಚನಾಮೆ |
| ನಿಪಿ–2 | : | ಹ್ಯಾಶಿಂಗ್ ವರದಿ |
| ನಿಪಿ–3 | : | ಚಿತ್ರೀಕರಣ ಸಿ.ಡಿ. |
| ನಿಪಿ–4 | : | ದೂರು |
| ನಿಪಿ–5 | : | ಸರ್ಚ್ ವಾರಂಟ್ |
| ನಿಪಿ–6 | : | ಪ್ರಥಮ ವರ್ತಮಾನ ವರದಿ |
| ನಿಪಿ–7 | : | ಕಲಂ 63(4)(ಸಿ) ಪ್ರಮಾಣ ಪತ್ರ |
| ನಿಪಿ–8 | : | ಸಿ.ಡಿ. |
| ನಿಪಿ–9 | : | ಎಫ್.ಎಸ್.ಎಲ್. ವರದಿ |
| ನಿಪಿ–10 | : | ಪಿ.ಡಿ.ಒ. ರವರಿಗೆ ಬರೆದ ಪತ್ರ |
| ನಿಪಿ–11 | : | ಪಿ.ಡಿ.ಒ. ರವರು ನೀಡಿದ ಮಾಹಿತಿ |

**ಆರೋಪಿಯ ಪರವಾಗಿ ನಿಶಾನೆ ದಾಖಲೆಗಳ ಪಟ್ಟಿ:**

–ಇಲ್ಲ–

**ಅಭಿಯೋಜನೆಯ ಪರ ಗುರುತಿಸಲಾದ ಮುದ್ದೆಮಾಲುಗಳ ಪಟ್ಟಿ:**

ಮು.ಮಾ–1 ರಿಂದ 7: 7 ಬಟ್ಟೆಯ ಚೀಲದಲ್ಲಿರುವ ಮದ್ಯದ ಪೌಚುಗಳು ಮತ್ತು ಟಿನ್‌ಗಳು

Digitally signed by
B. C. Chandrashekar
(Senior Civil Judge
and JMFC Honnavar)